ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರಸ್ತೆಗಳನ್ನು ಮಾಡಿಸುವುದು ಮತ್ತು ಅವುಗಳ ಮೇನ್‌ಟೇನ್ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ನಾವು ಏನಿದ್ದರೂ ಅವರಿಗೆ ಏಜೆನ್ಸಿ ಇದ್ದ ಹಾಗೆ ; ರಸ್ತೆ ಯಾವ ತರಹ ಇರಬೇಕು, ಎಷ್ಟು ಹಣ ಕೊಡಬೇಕು ಎಂಬ ವಿಚಾರದಲ್ಲಿ ಅವರು ಒವರಾಲ್ ಪ್ಲಾನ್‌ನಲ್ಲಿ ತೀರ್ಮಾನಮಾಡಿ ಹಣ ಕೊಡುತ್ತಾರೆ. ಅವರು ಕೊಡುವ ದನ್ನು ನೋಡಿಕೊಂಡು ನಾವು ಖರ್ಚು ಮಾಡಬೇಕಾಗಿದೆ. ಈಗ ಇದಕ್ಕೆ ಹೆಚ್ಚು ಹಣ ಇಲ್ಲವೆಂದು ಹೇಳುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ವಿಚಾರದಲ್ಲಿ ಬಹಳ ತೊಡರೆಯೊಗಿದೆ ಎಂದು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಅಲ್ಲಿಂದ ದುಡ್ಡನ್ನು ರಿಲೀಜ್ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒತ್ತಾಯ ಮಾಡಿರುವ ವಿಚಾರದಲ್ಲಿ ನಾವು ಯಾರಿಗೂ ಕಮ್ಮಿ ಇಲ್ಲ.

Abolition of Octroi by Bangalore City Corporation

209 Sri T. R. SHAMANNA (Fort)—

Will the Minister for Law and Municipal Administration be pleased to state :—

(*a*) whether the Government has dropped the proposal of abolishing octroi levy by Bangalore City Corporation and other local bodies ;

(*b*) if not, whether the Government has finalised the proposal to compensate the loss that would be suffered by the Municipalities and Local bodies on account of abolition of Octroi ?

Sri D. K. NAIKAR (Minister for Law and Municipal Administration).—

(*a*) No decision is taken yet.

(*b*) Does not arise in view of the reply to (*a*).

ಶ್ರೀ ಟಿ. ಆರ್. ಶಾಮಣ್ಣ.—ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ತೀರ್ಮಾನವನ್ನು ಇನ್ನೂ ಕೈಕೊಂಡಿಲ್ಲ ಎಂದು ಹೇಳಿದ್ದೀರಿ. ಈ ವಿಚಾರಥಲ್ಲಿ ವರ್ತಕರು, ರಾರಿ ಮಾಲೀಕರು ಒತ್ತಾಯ ಮಾಡುತ್ತಿದ್ದಾರೆ. ಆ ರೀತಿ ಏನಾದರೂ ಇದನ್ನು ರದ್ದುಗೊಳಿಸಿದರೆ ಸ್ಥಳೀಯ ಸಂಸ್ಥೆ ಗಳ ಆದಾಯಕ್ಕೆ ಧಕ್ಕೆ ಬರದಂತೆ ತೀರ್ಮಾನ ಕೈಕೊಳ್ಳುತ್ತೀರಾ ?

† ಶ್ರೀ ಡಿ. ಕೆ ನಾಯ್ಕರ್.—ಈ ವಿಚಾರದಲ್ಲಿ ಕೊನೆಯದಾಗಿ ಇನ್ನೂ ತೀರ್ಮಾನವಾಗಿಲ್ಲ. ಆದಕಾರ್ಣ ತಾವು ಕೇಳುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಈ ಸುಂಕವನ್ನು ವಸೂಲಿ ಮಾಡುವ ಬಗ್ಗೆ ಬಹಳಷ್ಟು ಹಣ ಸೋರಿ ಹೋಗುತ್ತಿದೆ ಮತ್ತು ಇದರಿಂದ ವರ್ತಕರಿಗೆ ಮತ್ತು ರಾರಿ ಮಾಲೀಕರಿಗೆ ಕಿರುಕುಳ ವಾಗುತ್ತಿದೆ ಎಂಬ ಕೂಗು ಇದೆ; ಇದನ್ನು ತಪ್ಪಿಸುವ ಬಗ್ಗೆ ಏನು ಕಾರ್ಯಕ್ರಮ ಕೈಕೊಂಡಿದ್ದೀರಿ ?

ಶ್ರೀ ಡಿ. ಕೆ. ನಾಯ್ಕರ್.—ಮರ್ಚೆಂಟ್ಸ್ ಅಸೋಷಿಯೇಷನ್ ಅವರು ಟ್ರಾನ್ಸ್‌ಪೋರ್ಟ್ ಆಪರೇಟರ್ಸ್ ಅಸೋಷಿಯೇಷನ್ ಅವರು ಇದು ಇನ್ ಡೈರೆಕ್ಟ್ ಟ್ಯಾಕ್ಸ್, ಇದರಿಂದ ತಮಗೆ ಬಹಳ ಹೆರಾಸ್‌ಮೆಂಟ್ ಆಗುತ್ತಿದೆ ಮತ್ತು ಇದರಲ್ಲಿ ಬಹಳ ಲೀಕೇಜ್ ಇದೆ ಎಂಬ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ವಿಚಾರ ಮಾಡಿ ಒಂದು ವರದಿ ಕೊಡಬೇಕೆಂದು ಸರ್ಕಾರದವರು ನ್ಯಡಿ ಗ್ರೂಪ್ ಕಮಿಟಿ ಎಂದು ಮಾಡಿದ್ದರು. ಅವರು ಈಗಾಗಲೇ ತಮ್ಮ ರಿಪೋರ್ಟ್ ಕೊಟ್ಟಿದ್ದಾರೆ. ಅದರ ಪರಿಶೀಲನೆಯಾದ ನಂತರ ಇದನ್ನು ತೆಗೆಯಬೇಕು ಎನ್ನುವ

ದಾದರೆ ಯಾವುದನ್ನು ರಿಪ್ಲೇಸ್ ಮಾಡಬೇಕು ಎಂಬುದನ್ನು ನೋಡುತ್ತೇವೆ. ಇದರಲ್ಲಿ ಲೀಕೇಜ್ ಇದೆ ಎಂದು ತಾವು ಹೇಳಿರುವುದರ ಬಗ್ಗೆ ಹೇಳುವುದಾದರೆ, ಅವನ್ನು ಯಾವ ರೀತಿ ಪ್ಲಗ್ ಮಾಡಬೇಕು ಎಂಬ ಬಗ್ಗೆ ಕಾರ್ಯಕ್ರಮ ಕೈಗೆಕೊಳ್ಳುತ್ತಾ ಬಂದಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಕಾರ್ಪೊರೇಷನ್‌ನಲ್ಲಿ ಚರ್ಚೆಯಾಗದೆ ಸುಮಾರು 200 ಕ್ಕೂ ಹೆಚ್ಚು ಸಾಮಾನುಗಳ ಮೇಲೆ ಹೊಸದಾಗಿ ಈ ಸುಂಕವನ್ನು ಹಾಕಲಾಗಿದೆ. ಇದರಿಂದ ಜನ ಸಾಮಾನ್ಯರಿಗೆ ತೊಂದರೆಯಾಗಿದೆ. ಆದಕಾರಣ ಇದನ್ನು ಪರಿಶೀಲನೆ ಮಾಡಿ ಈ ಸುಂಕವನ್ನು ತೆಗೆಯುವುದರ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಈಗ ಕಾರ್ಪೊರೇಷನ್‌ನ ವರು ಹೊಸದಾಗಿ ಕೆಲವು ಸಾಮಾನುಗಳ ಮೇಲೆ ಹಾಕಿರತಕ್ಕಂಥ ಸುಂಕ ಏನಿದೆ, ಅವುಗಳ ಪೈಕಿ ಹೆಚ್ಚಾಗಿ ಸಾಮಾನ್ಯ ಜನತೆ ಉಪಯೋಗಿಸುವಂತಹ ವಸ್ತುಗಳಲ್ಲಿ ಎಂದು ನನ್ನ ಅಭಿಪ್ರಾಯ. ಈ ವಿಚಾರವನ್ನು ಆ ಮನೆಯಲ್ಲಿ ಕೂಡ ಉತ್ತರ ರೂಪದಲ್ಲಿ ಹೇಳಿದ್ದೇನೆ. ಮತ್ತು ಈ ರೀತಿ ತೆರಿಗೆ ಹಾಕುವಂತಹ ಸಂಬಂಧದಲ್ಲಿ ಕಾರ್ಪೊರೇಷನ್ ಅವರಿಗೆ ಅಧಿಕಾರ ಇರುವುದರಿಂದ ಸರ್ಕಾರ ಇದರಲ್ಲಿ ಕೈಹಾಕುವುದಕ್ಕೆ ಬರುವುದಿಲ್ಲವೆಂಬ ಮಾತನ್ನು ಸಹ ಈಗಾಗಲೇ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಚಾರದಲ್ಲಿ ಒಂದು ಸ್ಟಡಿ ಗ್ರೂಪ್ ಕಮಿಟಿ ಮಾಡಲಾಗಿದೆ ಎಂದು ಕೇಳಿದ್ದಿರಿ. ಇಂತಹ ಕಮಿಟಿಗಳನ್ನು ಈ ಹಿಂದೆ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಅನೇಕ ಸಲ ನೇಮಕ ಮಾಡಿರಲಿಲ್ಲವೇ ? ಜೊತೆಗೆ ಭೂಲಿಂಗಪ್ಪ ಕಮಿಟಿಯವರು ಸಹ ಇದರ ಬಗ್ಗೆ ವಿಮರ್ಶೆ ಮಾಡಿ ಇದು ಹಳೆಯ ಕಾಲದ ಮತ್ತು ಹಿಟ್ಲರಾಯನ ಕಾಲದ ಪದ್ಧತಿಯಾದ್ದರಿಂದ ಇದನ್ನು ರದ್ದುಗೊಳಿಸುವುದು ಒಳ್ಳೆಯದೆಂದು ಹೇಳಿಲ್ಲವೇ ? ಆದರೂ ಬೇರೆ ಒಂದು ಕಮಿಟಿ ನೇಮಕ ಮಾಡುವ ಅಗತ್ಯ ಏನಿತ್ತು ! ಈಗ ಅವರು ಕೊಟ್ಟಿರುವ ವರದಿ ಬಗ್ಗೆ ಏನು ತೀರ್ಮಾನ ಕೈಕೊಂಡಿದ್ದೀರಿ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಮೊನ್ನೆ ಕೇಂದ್ರ ಸರ್ಕಾರದ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೇಯರ್‌ಗಳ ಮತ್ತು ಉಪಮೇಯರ್‌ಗಳ ಒಂದು ಕಾನ್‌ಫರೆನ್ಸ್ ನಡೆದಾಗ ಅಲ್ಲಿಗೆ ಸಂಬಂಧಪಟ್ಟ ಮಂತ್ರಿಗಳನ್ನು ಸಹ ಕರೆಸಿದ್ದರು. ಅಲ್ಲಿ ಈ ಸುಂಕ ಇರಬೇಕೋ ಅಥವಾ ಬೇಡವೊ ಎಂಬ ವಿಚಾರ ಬಂದಾಗ ಮೆಜಾರಿಟಿಯಲ್ಲಿ ಇದು ಇರಬೇಕು ಎಂಬ ಅಭಿಪ್ರಾಯ ಬಂತು. ಆದರ ಜೊತೆಗೆ ನಮ್ಮ ರಾಜ್ಯದಲ್ಲಿ ಸಹ ಮೊನ್ನೆ ದಾವಣಗೆರೆಯಲ್ಲಿ ಮುನಿಸಿಪಾಲಿಟಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸಮ್ಮೇಳನವೊಂದು ನಡೆದಾಗ ಸಹ ಈ ಪದ್ಧತಿಯನ್ನು ಮುಂದು ವರೆಸಬೇಕೆಂದು ಯುನಾನಿಮಸ್ ಆಗಿ ಅಲ್ಲಿ ತೀರ್ಮಾನವಾಗಿದೆ. ಈ ರೀತಿ ಬೇರೆಬೇರೆ ಅಭಿಪ್ರಾಯಗಳು ಬಂದಿದ್ದರಿಂದ ಸರ್ಕಾರ ಯಾವ ಧೋರಣೆ ಇಟ್ಟುಕೊಳ್ಳಬೇಕು ಎಂಬ ಬಗ್ಗೆ ಒಂದು ಕಮಿಟಿಯನ್ನು ನೇಮಕ ಮಾಡಿತು. ಆ ಕಮಿಟಿಯವರು ಈ ಹಿಂದಿನ ಕಮಿಟಿಗಳ ವರದಿಗಳನ್ನು ಸಹ ನೋಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಸರ್ಕಾರ ಗಮನದಲ್ಲಿಟ್ಟು ಕೊಂಡು ತೀರ್ಮಾನ ಕೈಕೊಳ್ಳುತ್ತದೆ.

ಶ್ರೀ ಎಂ. ವೆಂಕಟಲಿಂಗಯ್ಯ.—ಆ ಕಮಿಟಿಯವರ ವರದಿಯನ್ನು ಪರಿಶೀಲನೆ ಮಾಡಲು ಸರ್ಕಾರಕ್ಕೆ ಎಷ್ಟು ಕಾಲ ಬೇಕಾಗುತ್ತದೆ ? ಅದಕ್ಕೆ ಕಾಲಾವಧಿ ಏನಾದರೂ ಇದೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಅವರು ನೊನ್ನೆ ಮೊನ್ನೆ ವರದಿ ಕೊಟ್ಟಿದ್ದಾರೆ. ಅದನ್ನು ಅಭ್ಯಾಸ ಮಾಡಲು ವರ್ಷಗಟ್ಟಲೆ ಅಥವಾ ತಿಂಗಳುಗಟ್ಟಲೆ ಸಮಯ ಬೇಕಾಗುವುದಿಲ್ಲವೆಂಬ ವಿಚಾರ ಮಾನ್ಯ ಸದಸ್ಯರಿಗೂ ಸಹ ಗೊತ್ತಿದೆ.

ಶ್ರೀ ಟಿ. ಆರ್. ಶಾಮಣ್ಣ.—ಕಾರ್ಪೊರೇಷನ್ ಸಭೆಯಲ್ಲಿ ಹೊಸದಾಗಿ 200 ಪದಾರ್ಥಗಳ ಮೇಲೆ ಈ ಸುಂಕವನ್ನು ವಿಧಿಸುವ ಬಗ್ಗೆ ನಿರ್ಣಯ ಬಂದಾಗ ನಾನು ಹತ್ತಾರು ಅಬ್ಜಕ್ಷನ್ ಹಾಕಿದೆ ಆದರೂ ಅದು ಚರ್ಚೆಯಿಲ್ಲದೆ ತೀರ್ಮಾನವಾಯಿತು ಎಂದು ಪುಸ್ತಕದಲ್ಲಿ ಬರೆದಿದ್ದಾರೆ. ಇದರಿಂದ ಜನರಿಗೆ ತೊಂದರೆಯಾಗಿದೆ. ಈ ಬಗ್ಗೆ ವಿವರಗಳನ್ನು ಕೊಟ್ಟರೆ ಅದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರ ಪ್ರಶ್ನೆ ಈಗಿನ ಪ್ರಶ್ನೆಗೆ ಬಹು ದೂರ ಆ ಬಗ್ಗೆ ಪುನ : ಒಂದು ಪ್ರಶ್ನೆ ಹಾಕಿದರೆ ಮಾಹಿತಿ ಪಡೆದುಕೊಂಡು ಉತ್ತರ ಕೊಡುತ್ತೇ